ಶ್ರೀ ಎಂ. ವೀರಪ್ಪ ಮೊಯಿಲಿ.—ಉತ್ತರ ಕನ್ನಡ ಜಿಲ್ಲೆಯಲ್ಲಿ ೧೭೯ ಪ್ರಕರಣಗಳು ಇವೆ. ಇವೆಲ್ಲಾ ಲಕ್ಷಾಧೀಶ್ವರರು ಕಟ್ಟಿದಂತಹ ಮನೆಗಳು ಅಲ್ಲ. ಅದರಲ್ಲಿ ಅರ್ಹತೆಯನ್ನು ಪಡೆಯದೇ ಇರುವವರು ಯಾರಾದರೂ ಅಲ್ಲಿ ಮನೆ ಕಟ್ಟಿಕೊಂಡಿದ್ದರೆ ಅವರ ಮೇಲೆ ಸೂಕ್ತ ಕ್ರಮ ತೆಗೆದು ಕೊಳ್ಳಬಹುದು. ಅಂತಹ ನಿರ್ದಿಷ್ಟ ಪ್ರಕರಣಗಳು ಯಾವುದು ಎಂಬುದನ್ನು ಹುಡುಕಿ ಎಂದು ಹೇಳುತ್ತೇನೆ. ಆದರೆ ಸಾರಾಸಗಟಾಗಿ ಎಲ್ಲರೂ ಮಾಡುವಂತಹ ಏನ್‌ಕ್ರೋಚ್‌ಮೆಂಟ್ ಅನ್ನು ರೆಗ್ಯುಲರೈಸ್ ಮಾಡುವಂತಹ ಸ್ಕೀಮ್ ಸರಕಾರದಲ್ಲಿ ಇಲ್ಲ. ಯಾರಿಗೆ ಅರ್ಹತೆ ಇದೆ ಅವರು ಅದನ್ನು ಸಕ್ರಮ ಮಾಡತಕ್ಕಂತಹ ಕಾರ್ಯಕ್ರಮ ಸರಕಾರದ ಮುಂದೆ ಇದೆ. ಇದಕ್ಕೂ ಲ್ಯಾಂಡ್ ರೆವಿನ್ಯೂ ಆಕ್ಟ್‌ನ್ನು ಅಮೆಂಡ್‌ಮೆಂಟ್ ಮಾಡಬೇಕಾಗುತ್ತದೆ.

ಗ್ರಾಮಾಧಿಕಾರಿಗಳ ಹುದ್ದೆಯನ್ನು ರದ್ದು ಪಡಿಸುವುದು

೨೦೮. ಶ್ರೀ ಸಿ. ಬೈರೇಗೌಡ (ವೇಮಗಲ್).—ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಪಟೇಲ್, ಶ್ಯಾನುಭೋಗ, ತೋಟಿ ತಳವಾರ, ನೀರುಗಂಟಿ ಮುಂತಾದ ಗ್ರಾಮಾಧಿಕಾರಿಗಳ ಹುದ್ದೆಯನ್ನು ಏಂದಿನಿಂದ ರದ್ದು ಪಡಿಸಲಾಗಿದೆ ?

ಆ) ಈ ಹುದ್ದೆಗಳನ್ನು ರದ್ದುಪಡಿಸುವಾಗ ಪರಿಹಾರವನ್ನು ಏನಾದರೂ ನೀಡಲಾಗಿದೆಯೇ, ಹಾಗಿದ್ದರೆ ಯಾವ ಯಾವ ಹುದ್ದೆಗೆ ಎಷ್ಟೆಷ್ಟು ಪರಿಹಾರ ನೀಡಲಾಗಿದೆ ?

ಇ) ಈ ಹುದ್ದೆಗಳಲ್ಲಿದ್ದವರಿಗೆ ಮಾಶಾಸನ ಏನಾದರೂ ಕೊಡಲಾಗುತ್ತದೆಯೇ ?

ಈ) ಹಾಗಿದ್ದಲ್ಲಿ ಯಾವ ಯಾವ ಹುದ್ದೆಗೆ ಎಷ್ಟೆಷ್ಟು ಮಾಶಾಸನ ಕೊಡಲಾಗುತ್ತದೆ ?

ಉ) ಕೋಲಾರ ತಾಲ್ಲೂಕಿನಲ್ಲಿ ಅನೇಕ ಗುಮಾಸ್ತ ಪಟೇಲರಿಗೆ ಮತ್ತು ಗುಮಾಸ್ತ ಶ್ಯಾನುಭೋಗರಿಗೆ ಮಾಶಾಸನ ಕೊಡುತ್ತಿರುವುದು ನಿಜವೇ ?

ಊ) ಚಿಂತಾಮಣಿ ತಾಲ್ಲೂಕಿನಲ್ಲಿ ಮಾಶಾಸನವನ್ನು ಗುಮಾಸ್ತ ಪಟೇಲರಿಗೆ ಕೊಡದೇ ಇರುವುದು ನಿಜವೇ ? ಹಾಗಿದ್ದಲ್ಲಿ ಇದಕ್ಕೆ ಕಾರಣವೇನು ?

ಋ) ಎಲ್ಲಾ ಗುಮಾಸ್ತ ಪಟೇಲರಿಗೂ ಮಾಶಾಸನವನ್ನು ಕೊಡಲಾಗುವುದೇ ?

ಶ್ರೀ ಕೆ. ಹೆಚ್. ಪಾಟೀಲ್ (ಕಂದಾಯ ಸಚಿವರು).—

ಅ) ೧–೨–೬೩ ರಿಂದ ರದ್ದುಪಡಿಸಲಾಗಿದೆ.

ಆ) ವಂಶಪಾರಂಪರ್ಯ ಹಕ್ಕುಗಳನ್ನು ಕಳೆದುಕೊಂಡವರಿಗೆ ಕರ್ನಾಟಕ ಗ್ರಾಮಾಧಿಕಾರಿಗಳ ರದ್ದಿಯಾಶಿ ಕಾಯಿದೆ ೧೯೬೧ರ ಕಲಂ ಅಧೀನದಲ್ಲಿ ಪರಿಹಾರವನ್ನು ನಿಡಲಾಗಿದೆ. ಈ ಪರಿಹಾರ ಧನವು ಜವೀನು ಹೊಂದಿದವರಿಗೆ ನೀಡಲಾಗುವ ಪೋಟಿಗೆಯ ಮೂರು ಪಟ್ಟು ಮತ್ತು ಜವೀನು ಇಲ್ಲದವರಿಗೆ ನೀಡಲಾಗುವ ಪೋಟಿಗೆಯ ೬ ಪಟ್ಟು ಇರುತ್ತದೆ.

ಇ) ಹೌದು.

ಈ) ವಂಶಪಾರಂಪರ್ಯ ಹಕ್ಕುಗಳನ್ನು ಕಳೆದುಕೊಂಡ ಶ್ಯಾನುಭೋಗರುಗಳಿಗೆ (ಶ್ಯಾನುಭೋಗರು, ಕರ್ಣಂಗಳು ಮತ್ತು ಪಟ್ವಾರಿಗಳು) ಮತ್ತು ಪಟೇಲರಿಗೆ ಮಾಹೆಯಾನ ೧೦೦-೦೦ ರೂ.ಗಳ ಹಾಗೂ ಕೆಳದರ್ಜೆ ಗ್ರಾಮಾಧಿಕಾರಿಗಳಿಗೆ ೭೫-೦೦ ರೂ. ಗಳ ಅನುಕಂಪ ಭತ್ಯೆಯನ್ನು ಹಲವು ಷರತ್ತುಗಳಿಗೊಳಪಟ್ಟು ನೀಡಲಾಗುತ್ತಿದೆ.

ಉ) ಕೋಲಾರ ತಾಲ್ಲೂಕಿನಲ್ಲಿ ಗುಮಾಸ್ತ ಪಟೇಲರಿಗೆ ಮತ್ತು ಗುಮಾಸ್ತ ಶ್ಯಾನುಭೋಗರಿಗೆ ಮಾಶಾಸನ ಕೊಟ್ಟಿರುವುದಿಲ್ಲ.

ಊ) ಸರ್ಕಾರಿ ಆದೇಶದ ಅನ್ವಯಕ್ಕೆ ಇವರು ಒಳಪಡದೇ ಇರುವುದರಿಂದ. ಚಿಂತಾಮಣಿ ತಾಲ್ಲೂಕಿನ ಗುಮಾಸ್ತ ಪಟೇಲರಿಗೆ ಮಾಶಾಸನ ಕೊಡಲು ಬರುವುದಿಲ್ಲ

ಋ) ಯಾವ ಗುಮಾಸ್ತ ಪಟೇಲರಿಗೂ ಮಾಶಾಸನವನ್ನು ಕೊಡುವುದು ಸಾಧ್ಯವಿಲ್ಲ.

ಶ್ರೀ ಸಿ. ಬೈರೆಗೌಡ.—ಮಾನ್ಯ ಅಧ್ಯಕ್ಷರೆ, ನನಗೆ ಒದಗಿಸಿರತಕ್ಕ ಉತ್ತರದಲ್ಲಿ ನನ್ನ ಹೆಸರಿನ ಹಿಂದೆ ''ಸಿ'' ಎಂಬುದಕ್ಕೆ ಬದಲಾಗಿ ''ಎಲ್'' ಎಂದು ಟೈಪ್ ಆಗಿದೆ.

ಅಧ್ಯಕ್ಷರು.—ಈ ಸ್ಟೆನ್ಸಿಲ್‌ನ್ನು ಮಾಡತಕ್ಕವರು ಗೌರ್ನಮೆಂಟ್ ಸೆಕ್ರೆಟೇರಿಯೇಟ್‌ನವರು ಅಲ್ಲಿ ತಪ್ಪಾಗಿರಬಹುದು. ಆದರೆ ನಮ್ಮ ಲೆಜಿಸ್ಲೇಚರ್ ಸೆಕ್ರೆಟರಿಯೇಟ್‌ನವರು ಮಾಡಿರತಕ್ಕದ್ದರಲ್ಲಿ ಏನಾದರೂ ತಪ್ಪಿದೆಯೇ ? ನಮ್ಮಲ್ಲಿ ಮಾಡಿರತಕ್ಕದ್ದು ಸರಿಯಾಗಿದೆ.

ಶ್ರೀ ಎಂ: ವೀರಪ್ಪಮೊಯ್ಲಿ.—ಮಾನ್ಯ ಅಧ್ಯಕ್ಷರೆ, ನಮ್ಮ ಇಲಾಖೆಯಿಂದ ಆಗಿರತಕ್ಕ ತಪ್ಪಿಗೆ ನಾನು ಕ್ಷಮೆ ಕೇಳುತ್ತೇನೆ.

ಶ್ರೀ ಸಿ. ಬೈರೇಗೌಡ.—ಸ್ವಾಮಿ, ನನ್ನ ''ಈ'' ಪ್ರಶ್ನೆಗೆ ಉತ್ತರ ಕೊಟ್ಟಿರುವುದರಲ್ಲಿ ''..... ಅನುಕಂಪ ಭತ್ಯೆಯನ್ನು ಕೆಲವು ಷರತ್ತುಗಳಿಗೊಳಪಟ್ಟು ನೀಡಿಲಾಗುತ್ತಿದೆ.'' ಎಂದು ಹೇಳಿದ್ದೀರಿ. ಆ ಷರತ್ತುಗಳು ಯಾವುವು ಎಂಬುದನ್ನು ತಿಳಿಸುವುದಕ್ಕಾಗುತ್ತದೆಯೆ?

ಶ್ರೀ ಎಂ. ವೀರಪ್ಪಮೊಯ್ಲಿ —ಯಾರು ವಂಶಪಾರಂಪರ್ಯವಾಗಿ ಈ ಉದ್ಯೋಗವನ್ನು ಮಾಡಿಕೊಂಡು ಬಂದಿದ್ದಾರೆ ಅವರಿಗೆ ಈಗಾಗಲೇ ಮಾಸಾಶನವನ್ನು ಕೊಡತಕ್ಕ ಯೋಜನೆಯನ್ನು ಜಾರಿ ಮಾಡಿದ್ದೇವೆ. ಆದರೆ, ಕೆಲವು ನಾನ್ ಹೆರಿಡಿಟರಿಯಂತ ಎರಡು ಜಿಲ್ಲೆಗಳಲ್ಲಿ ಕೆಲವು ಮಂದಿ ಇದ್ದಾರೆ. ಆದರಲ್ಲೂ ಕೋಲಾರ ಜಿಲ್ಲೆಯಲ್ಲಿದ್ದಾರೆ. ನಾನ್ ಹೆರಿಡಿಟರಿ ಶ್ಯಾನುಭೋಗ್ ಗುಮಾಸ್ತ ಎಂದು ಇದ್ದಾರೆ. ಪಟೇಲ ಅಥವಾ ಶ್ಯಾನುಭೋಗ ಇಲ್ಲದೇ ಇರತಕ್ಕ ಸಂದರ್ಭದಲ್ಲಿ ಕೆಲಸವಾಡತಕ್ಕವರು ಇವರು. ಇವರು ವಂಶಪಾರಂಪರ್ಯವಾಗಿ ಕೆಲಸ ಮಾಡುವುದಿಲ್ಲ. ಎಂದೆರಡು ವರ್ಷ ಈ ಕೆಲಸವನ್ನು ಮಾಡುತ್ತಾರೆ, ಆಮೇಲೆ ನಾಲ್ಕಾರು ವರ್ಷ ಆ ಕೆಲಸ ಇಲ್ಲದೆ ಮತ್ತೆ ಒಂದೆರಡು ವರ್ಷ ಮಾಡುತ್ತಾರೆ. ಇದು ಒಂದು ರೀತಿ, ಮತ್ತೆ ಕೆಲವರು ೨೦-೨೫ ವರ್ಷಗಳವರೆಗೆ ಮಾಡಿರತಕ್ಕವರೂ ಇದ್ದಾರೆ. ಇವರು ಶ್ಯಾನುಭೋಗರಿಗೆ ಸಹಾಯವನ್ನು ಮಾಡುವುದಕ್ಕಾಗಿ ಇರತಕ್ಕ ಗುಮಾಸ್ತರು. ನಾನ್ ಹೆರಿಡಿಟರಿ ಗುಮಾಸ್ತರುಯಾರಿದ್ದಾರೆ ಇವರು ಪಟೇಲರು ಮತ್ತು ಶ್ಯಾನುಭೋಗರು ಇಲ್ಲದಿರತಕ್ಕ ಸಂದರ್ಭಗಳಲ್ಲಿ ಇವರೇ ಸ್ವತಂತ್ರವಾಗಿ ಕೆಲಸಮಾಡಿರತಕ್ಕದ್ದೂ ಇದೆ. ಇವರಿಗೆ ನಮ್ಮ ಯೋಜನೆ ವಿಸ್ತರಣೆ ಆಗಿಲ್ಲ.

ಶ್ರೀ ಸಿ ಬೈರೇಗೌಡ.— ಸ್ವಾಮಿ, ನಾನು ಕೋಲಾರ ತಾಲುಕಿನಲ್ಲಿ ಅನೇಕ ಗುಮಾಸ್ತಪಟೇಲರಿಗೆ ಮತ್ತು ಗುಮಾಸ್ತ ಶ್ಯಾನುಭೋಗರಿಗೆ ಮಾಸಾಶನ ಕೊಡುತ್ತಿರುವುದು ನಿಜವ? ಎಂದು ನಾನು ಕೆ ಳರತಕ್ಕ ಪ್ರಶ್ನೆಗೆ ''ಕೋಲಾರ ತಾಲೂಕಿನಲ್ಲಿ ಗುಮಾಸ್ತ ಪಟೇಲರಿಗೆ ಮತ್ತು ಗುಮಾಸ್ತ ಶ್ಯಾನುಭೋಗರಿಗೆ ಮಾಸಾಶನ ಕೊಟ್ಟಿರುವುದಿಲ್ಲ''ಎಂದು ಉತ್ತರವನ್ನು ಕೊಟ್ಟಿದ್ದೀರಿ. ಇದು ತಪ್ಪು ಮಾಹಿತಿ. ಈರೀತಿಯ ತಪ್ಪು ಮಾಹಿತಿಯನ್ನು ನಿಮ್ಮ ಅಧಿಕಾರಿಗಳು ಕೊಟ್ಟಿದ್ದಾರೆ. ಆದ್ದರಿಂದ ಅವರ ಬಗ್ಗೆ ತಾವು ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ನಾನು ಈ ಪ್ರಶ್ನೆಯನ್ನು ಕೇಳುವಾಗ ನಿರ್ದಿಷ್ಟವಾಗಿ ಒಬ್ಬರ ಹೆಸರನ್ನು ಕುರಿತು ಕೇಳಬಾರದೆಂದು ಈರೀತಿ ಕೇಳಿದ್ದೇನೆ. ತಾವು ಇದನ್ನು ಬರೆದುಕೊಳ್ಳಬೇಕು. ಶ್ರೀ ಎ.ಜಿ ನಾರಾಯಣಗೌಡ, ಅಮ್ಮನಲ್ಲೂರು, ಇವರು ಗುಮಾಸ್ತ ಪಟೇಲರು,ಇವರಿಗೆ ಮಾಸಾಶನ ಕೊಟ್ಟಿದ್ದೀರಿ. ಇದೇ ರೀತಿ ನನಗೆ ತಿಳಿದಿರುವಂತೆ ಕೋಲಾರ ತಾಲೂಕಿನಲ್ಲಿ ಇನ್ನೂ ಸುಮಾರು ೫೦-೪೦ ಜನರಿಗೆ ಮಾಸಾಶನ ಕೊಡುತ್ತಿದ್ದೀರಿ. ಆದರೂ ನನ್ನ ಪ್ರಶ್ನೆಗೆ ''ಕೊಟ್ಟಿರುವುದಿಲ್ಲ'', ಎಂದು ತಪ್ಪು ಮಾಹಿತಿಯನ್ನು ನಿಮ್ಮ ಅಧಿಕಾರಿಗಳು ಕೊಟ್ಟಿದ್ದಾರೆ. ಈರೀತಿ ತಪ್ಪು ಮಾಹಿತಿಯನ್ನು ಕೊಟ್ಟಿರತಕ್ಕ ಅಧಿಕಾರಿಗಳ ವಿರುದ್ಧ ಕ್ರಮ ತೆಗೆದುಕೊಳ್ಳಬೇಕು. ಚಿಂತಾಮಣಿ ತಾಲ್ಲೂಕಿನಲ್ಲೂ ಕೂಡ ಸ್ವಲ್ಪಭಾಗ ನನ್ನ ಕ್ಷೇತ್ರಕ್ಕೆ ಬರುತ್ತದೆ. ಅಲ್ಲಿ ಕೆಲವು ಹಳ್ಳಿಗಳಲ್ಲಿ ತಕ್ಕವರಿಗೆ ಈ ಮಾಸಾಶನವನ್ನು ಕೊಡುತ್ತಿದ್ದೀರಿ, ಇನ್ನು ಕೆಲವರಿಗೆ ಕೊಡುತ್ತಿಲ್ಲ. ಇದರಿಂದಾಗಿ ಕೊಡಬೇ ಇರತಕ್ಕ ಜನರು ನನ್ನನ್ನು ಕೇಳುತ್ತಿದ್ದಾರೆ. ಇಲ್ಲಿ ತಾವು ನಾನ್ ಹೆರಿಡಿಟರಿ ಎಂದು ಹೇಳುತ್ತಿದ್ದೀರಿ. ಇದು ಪೂರ್ತಿಯಾಗಿ ಸರಿಯಲ್ಲ ತಂದೆಯ ಹೆಸರು ಬರಾಬರ್ ರಿಜಿಸ್ಟರ್ ಎಂಬುದರಲ್ಲಿ ಇರುತ್ತದೆ. ತಂದೆ ತೀರಿಹೋದ ಮೇಲೆ ಮಗನಿಗೆ ಆ ಕೆಲಸ ವಂಶಪಾರಂಪರ್ಯವಾಗಿ ಬರುತ್ತದೆ. ಮಗ ಪಟೇಲನಾಗುತ್ತಾನೆ. ಆದರೆ ಮಗನ ಹೆಸರು ಆ ರಿಜಿಸ್ಟರ್‌ನಲ್ಲಿ ಇರುವುದಿಲ್ಲ. ಆದ್ದರಿಂದ ಇದನ್ನು ತಾವು ನಾನ್ ಹೆರಿಡಿಟರಿ ಎಂದು ಹೇಳುತ್ತಿದ್ದೀರಿ. ತಂದೆ ಆದಮೇಲೆ ಯಾರು ಮಗ ಇರುತ್ತಾನೆ ಅವನು ಪಟೇಲ ಅಥವಾ ಶ್ಯಾನುಭೋಗ ಆಗಿರುತ್ತಾನೆ ಅಂಥ ಸಂದರ್ಭದಲ್ಲಿ ನೀವು ಮಾಸಾಶನ ಕೊಡುವುದಕ್ಕೆ ವಿಪ್ಪಾದು ಮಾಡುತ್ತೀರಾ ? ಅವನ ಹೆಸರು ಬರಾಬರ್ ರಿಜಿಸ್ಟರ್‌ನಲ್ಲಿ ಇಲ್ಲ ಎನ್ನುತಕ್ಕ ಕಾರಣದಿಂದ ಇದು ರಿಜೆಕ್ಟ್ ಆಗಿರತಕ್ಕದ್ದು. ಇದು ಸರಿಯಲ್ಲ. ಅವನು ಅನುವಂಶಿಕವಾಗಿರುತ್ತಾನೆ. ಆದ್ದರಿಂದ ಇದನ್ನು ಪರಿಶೀಲಿಸಿ ಇವರಿಗೂ ಮಾಸಾಶನವನ್ನು ಕೊಡತಕ್ಕ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಎಂ. ವೀರಪ್ಪಮೊಯ್ಲಿ.—ಇದೇ ರೀತಿ ಗುಪಾಸ್ತ ಶ್ಯಾನುಭೋಗರೂ ಕೂಡ ನಾನ್ ಹೆರಿಡಿಟರಿಯವರು ಇರುತ್ತಾರೆ. ಇಂಥ ಕೆಲವು ಪ್ರಸಂಗಗಳಲ್ಲಿ ಕೆಲವರಿಗೆ ಕೊಟ್ಟಿದ್ದೀರಿ, ಇನ್ನು ಕೆಲವರಿಗೆ ಕೊಟ್ಟಿಲ್ಲವೆಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಅವರು ಹೇಳುವುದರಲ್ಲಿ ಸತ್ಯವಿದೆ. ಇದು ನನಗೂ ಗೊತ್ತಿದೆ. ಕೆಲವು ಕಡೆ ನಾನ್ ಹೆರಿಡಿಟರಿ ಗುಪಾಸ್ತ ಪಟೇಲರಿಗೆ, ಗುಪಾಸ್ತ ಶ್ಯಾನುಭೋಗರಿಗೆ ಕೊಟ್ಟಿಲ್ಲ. ಈಗ ತಾವು ಏನು ಕೆಲವರಿಗೆ ಕೊಟ್ಟಿದೆ, ಕೆಲವರಿಗೆ ಕೊಟ್ಟಿಲ್ಲ ಎಂಬ ವಿಚಾರವನ್ನು ತಿಳಿಸಿದ್ದೀರಿ ಇದನ್ನು ಖಂಡಿತವಾಗಿಯೂ ಪರಿಶೀಲಿಸುತ್ತೇನೆ ಮತ್ತು ಯಾರಿಂ ತಪ್ಪು ಮಾಹಿತಿಯನ್ನು ನನಗೆ ಕೊಟ್ಟಿದ್ದಾರೆ ಎಂಬ ಬಗ್ಗೆ ವಿಚಾರ ಮಾಡುತ್ತೇನೆ. ಆನೇಕ ಸಂದರ್ಭಗಳಲ್ಲಿ ಇಂಥ ಪ್ರಸಂಗಗಳು ಸರ್ಕಾರದ ಗಮನಕ್ಕೆ ಬಂದು ಅವರಿಗೆ ಅನುಕಂಪದ ಆಧಾರದ ಮೇಲೆ ಮಾಸಾಶನವನ್ನು ಕೊಡಬೇಕೆಂದಿದೆ. ಇದನ್ನು ನಾವು ಅನುಸರಿಸುತ್ತಿದ್ದೇವೆ. ತಾವು ಹೇಳಿದಂತೆ ೧೫–೨೦ ವರ್ಷಗಳ ಕಾಲ ಈ ರೀತಿಯ ಕೆಲಸವನ್ನು ಮಾಡಿರುತಕ್ಕವರೂ ಇದ್ದಾರೆ ಮತ್ತು ವಂಶ ಪಾರಂಪರ್ಯವಾಗಿ ಮಾಡಿರುತಕ್ಕವರೂ ಇದ್ದಾರೆ. ಇಂಥ ಪ್ರಸಂಗವನ್ನು ನಾವು ಗಂಭೀರವಾಗಿ ಪರಿಶೀಲಿಸುತ್ತೇವೆ.

ಪ್ರಶಸ್ತಿ ಪಡೆದಿರುವ ಪೋಲೀಸ್ ಸಿಬ್ಬಂದಿ.

೬೦೭. ಶ್ರೀ ಆರ್. ನಾರಾಯಣ(ಬೆಳ್ಳಾವಿ).—ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ವಿಶಿಷ್ಟ ಸೇವೆ ಸಲ್ಲಿಸಿದ ರಾಜ್ಯದ ಪೋಲೀಸ್ ಅಧಿಕಾರಿಗಳಿಗೆ ಪ್ರತಿವರ್ಷ ಎಷ್ಟು ಮಂದಿಗೆ ರಾಷ್ಟ್ರಪತಿಗಳ ಪೋಲೀಸ್ ಪದಕಗಳನ್ನು ದೊರೆಯುತ್ತವೆ ?

ಆ) ಕನ್ನಡ ರಾಜ್ಯೋತ್ಸವದ ಸಂದರ್ಭದಲ್ಲಿ ಪ್ರತಿವರ್ಷ ಮಾನ್ಯ ಮುಖ್ಯಮಂತ್ರಿಗಳ ಪದಕಗಳನ್ನು ಉತ್ತಮ ಸೇವೆ ಸಲ್ಲಿಸುತ್ತಿರುವ ಪೋಲೀಸ್ ಅಧಿಕಾರಿಗಳಿಗೆ ಕೊಡುತ್ತಿರುವುದು ಸರಿಯಷ್ಟೆ, ಇವುಗಳನ್ನು ರಾಜ್ಯ ಪ್ರಶಸ್ತಿಯೆಂದು ಪರಿಗಣಿಸಲಾಗಿದೆಯೇ ?

ಇ) ಕೇಂದ್ರ ಸರ್ಕಾರವು ರಾಷ್ಟ್ರ ಪ್ರಶಸ್ತಿಗಳಿಸಿದ ಸಿಬ್ಬಂದಿಯವರಿಗೆ ರೈಲ್ವೆ ಪ್ರಯಾಣದಲ್ಲಿ ರಿಯಾಯಿತಿ ತೋರಿಸಿರುವಾಗ ರಾಜ್ಯ ಸರ್ಕಾರ ರಾಷ್ಟ್ರ ಪ್ರಶಸ್ತಿ ಮತ್ತು ರಾಜ್ಯ ಪ್ರಶಸ್ತಿ ಪಡೆದವರಿಗೆ ಬಸ್ಸಿನ ಪ್ರಯಾಣಕ್ಕೆ ರಿಯಾಯಿತಿ ಆಲೋಚನೆ ಇದೆಯೇ ?

ಈ) ರಾಜ್ಯ ಸರ್ಕಾರದಿಂದ ರಾಷ್ಟ್ರ ಪ್ರಶಸ್ತಿ ಹಾಗೂ ರಾಜ್ಯ ಪ್ರಶಸ್ತಿ ಪಡೆದ ಪೋಲೀಸ್ ಸಿಬ್ಬಂದಿ ವರ್ಗದವರಿಗೆ ಈ ಮುನ್ನ ನಿವೇಶನವಿಲ್ಲದವರಿಗೆ ಆದ್ಯತೆ ಮೇರೆಗೆ ನಿವೇಶನಗಳನ್ನು ನೀಡಲಾಗುತ್ತಿತ್ತೇ ?

ಶ್ರೀ ವೀರೇಂದ್ರ ಪಾಟೀಲ್ (ಮುಖ್ಯಮಂತ್ರಿಯವರು).—

ಅ) ಸಾಮಾನ್ಯವಾಗಿ ಒಂದು ಅಥವಾ ಎರಡು ಪದಕ ನೀಡಲಾಗುತ್ತಿತ್ತು. ಈಗ ಎರಡರಿಂದ ನಾಲ್ಕು ಪದಕಗಳನ್ನು ನೀಡಲಾಗುತ್ತಿದೆ.

ಆ) ಮುಖ್ಯಮಂತ್ರಿಗಳ ಪದಕಗಳನ್ನು ಈಗ ರಾಜ್ಯೋತ್ಸವ ದಿನಾಚರಣೆಗೆ ಬದಲಾಗಿ ಪೋಲೀಸು ಕಲ್ಯಾಣ ದಿನವಾದ ಏಪ್ರಿಲ್ ೨ನೇ ದಿನದಂದು ನೀಡಲಾಗುತ್ತಿದೆ. ಇದನ್ನು ರಾಜ್ಯ ಪ್ರಶಸ್ತಿಯೆಂದು ಪರಿಗಣಿಸಿದೆ.

ಇ) ಸಧ್ಯದಲ್ಲಿ ಯಾವ ಪ್ರಸ್ತಾಪನೆ ಇರುವುದಿಲ್ಲ.

ಈ) ಇಲ್ಲ.

ಶ್ರೀ ಆರ್. ನಾರಾಯಣ್.—ಸನ್ಮಾನ್ಯ ಅಧ್ಯಕ್ಷರೆ, ಉತ್ತರಗಳನ್ನು ಮಾನ್ಯ ಸಚಿವರು ಒದಗಿಸಿದ್ದಾರೆ. ಇದರಲ್ಲಿ ಮಾನ್ಯ ಮುಖ್ಯಮಂತ್ರಿಗಳ ಪದಕಗಳನ್ನು ಈಗ ರಾಜ್ಯೋತ್ಸವದ ದಿನಾಚರಣೆಗೆ ಬದಲಾಗಿ ಪೋಲೀಸು ಕಲ್ಯಾಣ ದಿನವಾದ ಏಪ್ರಿಲ್ ೨ನೇ ದಿನದಂದು ನೀಡಲಾಗುತ್ತಿದೆ. ಮತ್ತು ಇದನ್ನು ರಾಜ್ಯ ಪ್ರಶಸ್ತಿ ಎಂದು ಪರಿಗಣಿಸಿರುವುದು ಬಹಳ ಸ್ವಾಗತಾರ್ಹವಾಗಿದೆ. ಮತ್ತು ಈ ರೀತಿ ಕೊಟ್ಟ ಸ್ಟೇಟ್ ಅವಾರ್ಡ್‌ಗೆ ಏನಾದರೂ ಒಂದು ಮಹತ್ವ ದೊರಕಬೇಕಾದರೆ ಕೆಲವೊಂದು ರಿಯಾಯಿತಿಗಳನ್ನು ಕೊಡಬೇಕು, ಉತ್ತೇಜನವನ್ನು ಕೊಡಬೇಕು. ಈಗ ರಾಷ್ಟ್ರ ಪ್ರಶಸ್ತಿಯನ್ನು ಪಡೆದಂಥ ಪೋಲೀಸ್ ಅಧಿಕಾರಿಗಳಿಗೆ ರೈಲ್ವೆ ಪ್ರಯಾಣದಲ್ಲಿ ಒಂದು ರೀಯಾಯತಿಯನ್ನು ತೋರಿಸಿದ್ದಾರೆ. ಅದೇ ರೀತಿಯಲ್ಲಿ ರಾಜ್ಯ ಮತ್ತು ರಾಷ್ಟ್ರಪ್ರಶಸ್ತಿಯನ್ನು ಗಳಿಸಿದಂಥವರಿಗೆ ನಮ್ಮ ರಾಜ್ಯದಲ್ಲಿ ಬಸ್ಸಿನ ಪ್ರಯಾಣದರದಲ್ಲಿ ರೀಯಾಯಿತಿಯನ್ನು ತೋರಿಸಬೇಕೆಂದು ಕೇಳಿರುತ್ತೇನೆ. ಮತ್ತು ರಾಷ್ಟ್ರ ಪ್ರಶಸ್ತಿ ಮತ್ತು ರಾಜ್ಯ ಪ್ರಶಸ್ತಿಯನ್ನು ಗಳಿಸಿದಂಥವರಿಗೆ...